REVIEW OF RESEARCH
ISSN: 2249-894X
IMPACT FACTOR : 5.7631(UIF)
VOLUME - 15 | ISSUE - 11 | AUGUST - 2026

# ಮೈಸೂರು ಸಂಸ್ಥಾನದಲ್ಲಿ ಕರ್ನಾಟಕ ಏಕೀಕರಣ ಚಳವಳಿ

ಡಾ.ಎಸ್.ಶಿವರಾಮು.
ಸಹ ಪ್ರಾಧ್ಯಾಪಕರು,ಇತಿಹಾಸ ವಿಭಾಗ,
ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಚನ್ನಪಟ್ಟಣ, ಬೆಂಗಳೂರು ದಕ್ಷಿಣ ಜಿಲ್ಲೆ

**ಸಾರಾಂಶ (ABSTRACT)**

ಸ್ವಾತಂತ್ರ್ಯನಂತರ ಭಾರತ ಎದುರಿಸಿದ ಬಹುದೊಡ್ಡ ಸಮಸ್ಯೆಯೆಂದರೆ ಭಾಷಾವಾರು ಪ್ರಾಂತ್ಯಗಳ ಪುನರ್ ರಚನೆ. ಬಹು ಭಾಷಿಗರ ದೇಶವಾದ ಭಾರತದಲ್ಲಿ ಎಲ್ಲಾ ಧರ್ಮ, ಜಾತಿ ಹಾಗೂ ಭಾಷೆಗಳನ್ನು ಗೌರವದಿಂದ ಕಾಣುತ್ತಿದ್ದರು. ಭಾಷಾವಾರು ಆಂದೋಲನಗಳು ಭಾರತದಾದ್ಯಂತ ವ್ಯಾಪಕವಾಗಿ ಹರಡಲಾರಂಭಿಸಿತು. ಅದರಲ್ಲೂ ಮೈಸೂರು ಸಂಸ್ಥಾನದಲ್ಲಿ ಈ ಚಳವಳಿ ತೀವ್ರ ಸ್ವರೂಪವನ್ನು ಪಡೆದುಕೊಂಡಿತು. ಆರಂಭದಲ್ಲಿ ಏಕ ಕರ್ನಾಟಕ ಪರವಾಗಿದ್ದ ಹೋರಾಟಗಾರರಲ್ಲಿ ವಿಭಿನ್ನ ಅಭಿಪ್ರಾಯಗಳು ಮೂಡಲಾರಂಭಿಸಿದವು. ಅನಂತರ ದ್ವಿಕರ್ನಾಟಕ ವಾದ ಮೂಡಿತು. ಮಂಡ್ಯ ಭಾಗದಲ್ಲಿ ಮೈಸೂರು ಸಂಸ್ಥಾನವನ್ನು ಹಿಂದುಳಿದ ಉತ್ತರ ಕರ್ನಾಟಕದ ಜೊತೆ ವಿಲೀನವಾಗುವುದನ್ನು ವಿರೋಧಿಸಲಾರಂಭಿಸಿದರು. ಅದಕ್ಕಾಗಿ ಮೈಸೂರು ವಿಲೀನ ವಿರೋಧಿ ಆಂದೋಲನ ಏರ್ಪಾಟ್ಟಾಗಿತ್ತು. ಆದರೆ ಕಾಲಾನಂತರದಲ್ಲಿ ಮೈಸೂರು ಸಂಸ್ಥಾನದಲ್ಲಿ ಏಕೀಕರಣ ಚಳವಳಿಯು ಹಲವಾರು ನಾಯಕರ ಬದಲಾದ ನಿಲುವಿನಿಂದ ಸೋಲನ್ನಪ್ಪಿತ್ತು. ಇದರಿಂದ ಅಂತಿಮವಾಗಿ ಚಳವಳಿಯು ಅಖಂಡ ಕರ್ನಾಟಕದ ಏಕೀಕರಣ ನಿಲುವಿಗೆ ವಿಧಿ ಇಲ್ಲದೇ ಬದ್ಧರಾಗಬೇಕಾಯಿತು.




**Keywords**: ಮೈಸೂರು ಸಂಸ್ಥಾನ ,ವಿಲೀನ ವಿರೋಧಿ ಆಂದೋಲನ, ದ್ವಿಕರ್ನಾಟಕವಾದ.ವಸ್ತುಸ್ಥಿತಿ ಮಾಪಕ ಸಮಿತಿ.

15.08.1947 ರಂದು ಭಾರತವು ಸ್ವತಂತ್ರವಾಯಿತು. ನಂತರ ಎದುರಾದ ಬಹುದೊಡ್ಡ ಸಮಸ್ಯೆಯೆಂದರೆ ಭಾಷಾವಾರು ಪ್ರಾಂತ್ಯಗಳ ಪುನರ್ ರಚನೆ ಸ್ವಾತಂತ್ರ ಚಳುವಳಿಯ ಜೊತೆ ಜೊತೆಗೆ ನಡೆದ ರೋಮಾಂಚನಕಾರಿಯಾದ ಮತ್ತೊಂದು ಚಳುವಳಿಯೆಂದರೆ 'ಕರ್ನಾಟಕ ಏಕೀಕರಣ ಚಳುವಳಿ' ರಾಷ್ಟ್ರಪ್ರಜ್ಞೆಯು ವ್ಯಾಪಕವಾಗಿ ಹರಡಿದ ಕಾರಣದಿಂದ ಜನರನ್ನು ಭಾಷೆಯ ಆಧಾರದ ಮೇಲೆ ಏಕೀಕರಣಗೊಳಿಸುವ ಹಂಬಲವು ಹೆಚ್ಚಾಯಿತೆಂದು ಹೇಳಬಹುದು. ಒಂದೇ ಭಾಷೆಯನ್ನಾಡುವ ಜನರನ್ನು ಒಟ್ಟುಗೂಡಿಸುವಲ್ಲಿ ಭಾಷೆಯು ಮಾಧ್ಯಮವಾಗುವುದೆಂದು ಮನಗಾಣವಾಯಿತು.[1]

1938ರಲ್ಲಿ "ಕರ್ನಾಟಕವನ್ನು ಪ್ರತ್ಯೇಕ ಪ್ರಾಂತವಾಗಿ ರಚಿಸುವುದನ್ನು ವಿರೋಧಿಸಲಾಗದು ಕರ್ನಾಟಕ ಏಕೀಕೃತವಾಗಬೇಕೆಂಬುದೇ ನನ್ನ ಮಹಾದಾಶಯ" ಎಂದು ಮಹಾತ್ಮಗಾಂಧೀಜಿ ಯವರೇ ಕಾರ್ಯಕಾರಿ ಸಮಿತಿಯಲ್ಲಿ ಸಾರಿದ್ದರು. ಏಕೀಕರಣ ಪೂರ್ವದಲ್ಲಿ ಕನ್ನಡ ಭಾಷೆಯನ್ನು ಮಾತನಾಡುವ ಜನರು ಇಪ್ಪತ್ತು ಪ್ರತ್ಯೇಕ ಆಡಳಿತ ವಿಭಾಗಗಳಲ್ಲಿ ಹಂಚಿಹೋಗಿದ್ದರು. ಮೈಸೂರು ಅಲ್ಲದೆ ಮುಂಬಯಿ ಅಧಿಪತ್ಯಕ್ಕೆ ಸೇರಿದ್ದ ಧಾರವಾಡ, ಬೆಳಗಾವಿ, ಬಿಜಾಪುರ ಮತ್ತು ಉತ್ತರ ಕನ್ನಡ ಜಿಲ್ಲೆಗಳು, ಹೈದರಾಬಾದ್ ನಿಜಾಮನ ಆಳ್ವಿಕೆಗೆ ಸೇರಿದ್ದ ಬೀದರ್, ಗುಲ್ಬರ್ಗ, ರಾಯಚೂರು ಜಿಲ್ಲೆಗಳು, ಮದ್ರಾಸ್ ಅಧಿಪತ್ಯಕ್ಕೆ ಸೇರಿದ ದಕ್ಷಿಣ ಕನ್ನಡ ಜಿಲ್ಲೆ ಹಾಗೂ ಕೊಡಗು ಮತ್ತು ಸಣ್ಣ ಪುಟ್ಟ ಸಂಸ್ಥಾನಗಳಲ್ಲಿ ಹಂಚಿ ಹೋಗಿದ್ದರು. ಹೀಗೆ ಕರ್ನಾಟಕ ಒಂದಾಗಲು ನಿರಂತವಾದ ಎಡರು ತೊಡರುಗಳನ್ನು ಎದುರಿಸಿತು.

ಮೈಸೂರು ಸಂಸ್ಥಾನ ಕರ್ನಾಟಕ ರಚನೆಯ ಕೇಂದ್ರವಾಯಿತು ಮತ್ತು ಮೈಸೂರಿನ ಜನರ ಅಭಿಪ್ರಾಯಗಳಿಗೆ ಪ್ರಾಮುಖ್ಯತೆ ನೀಡಲಾಯಿತು. ಕರ್ನಾಟಕ ರಚನೆಯ ಬಗ್ಗೆ ಮೈಸೂರು ರಾಜ್ಯದ ಜನರ ಅಭಿಪ್ರಾಯಗಳನ್ನು ರೂಪಿಸುವಲ್ಲಿ ಅಂದಿನ ಮೈಸೂರು ಸಂಸ್ಥಾನದ ಹಲವು ಮುಖಂಡರುಗಳು ನಿರ್ಣಯಾತ್ಮಕ ಮತ್ತು ಮಹತ್ವದ ಪಾತ್ರವನ್ನು ವಹಿಸಿದ್ದರು. ಮೈಸೂರಿನಲ್ಲಿ ಸಮಸ್ಯೆ ಜಟಿಲವಾಗಿದ್ದು ಭೌಗೋಳಿಕ ದೃಷ್ಟಿಯಿಂದ ಕರ್ನಾಟಕಕ್ಕಾಗಿರುವಷ್ಟು ಅನ್ಯಾಯ ಭಾರತದಲ್ಲಿ ಬೇರಾವ ರಾಜ್ಯಗಳಿಗೂ ಆಗಿಲ್ಲ.

ಕರ್ನಾಟಕ ಏಕೀಕರಣ ಚಳುವಳಿಯ ಕಾಲದಲ್ಲಿ ಕನ್ನಡಿಗರಲ್ಲಿಯೇ ಪರ ಮತ್ತು ವಿರೋಧ ಪಕ್ಷಗಳು ಹುಟ್ಟಿಕೊಳ್ಳುತ್ತವೆ. ಏತನ್ಮಧ್ಯೆ ಘಟನಾ ಸಮಿತಿಯ ಅಧ್ಯಕ್ಷರು ಜೂನ್ 1948 ರಲ್ಲಿ ಧಾರ್ ಸಮಿತಿಯೆಂದು ಹೆಸರಾದ ಭಾಷಾನ್ವಯ ರಾಜ್ಯ ರಚನಾ ಆಯೋಗವನ್ನು ನೇಮಿಸಿದರು. ಈ ಸಮಿತಿ ಕರ್ನಾಟಕದಲ್ಲಿ ಸಂಚರಿಸಿ 1000ಕ್ಕಿಂತ ಹೆಚ್ಚು ಮನವಿಗಳನ್ನು ಸ್ವೀಕರಿಸಿದರು. 700 ಕ್ಕಿಂತ ಹೆಚ್ಚು ಸಾಕ್ಷಿದಾರರನ್ನು ಪರೀಕ್ಷಿಸಿದರು. ಈ ಆಯೋಗವು ಡಿಸೆಂಬರ್‌ನಲ್ಲಿ ತನ್ನ ವರದಿ ಸಲ್ಲಿಸಿ ಭಾಷಾನ್ವಯ ಪ್ರಾಂತ ರಚನೆಯನ್ನು ಕೈಗೊಳ್ಳಬಾರದೆಂದು ತಿಳಿಸಿತು.[2]

ಕೆ.ಸಿ.ರೆಡ್ಡಿ ಅವರ ಅಧ್ಯಕ್ಷತೆಯಲ್ಲಿ ನವೆಂಬರ್ 23. 1946 ರಲ್ಲಿ ಬೆಂಗಳೂರು ನಗರದಲ್ಲಿ ಸೇರಿದ್ದ ಮೈಸೂರು ಕಾಂಗ್ರೆಸ್ ಅಧಿವೇಶನವು ಕನ್ನಡ ಭಾಷೆಯ ಸಕಲ ಪ್ರದೇಶಗಳನ್ನೂ ಒಳಗೊಂಡ ಕರ್ನಾಟಕ ಪ್ರಾಂತವನ್ನು ಕೂಡಲೇ ರಚಿಸಬೇಕು ಎಂದು ಒತ್ತಾಯಿಸಿತು. ಈ ಗುರಿಯನ್ನು ಗಮನದಲ್ಲಿಟ್ಟುಕೊಂಡು ಮೈಸೂರು ಕಾಂಗ್ರೆಸ್ ವಸ್ತುಸ್ಥಿತಿಯ ಬಗೆಗೆ ಅಂಕಿ–ಅಂಶ ಸಂಗ್ರಹಿಸಲು ಐವರ ಸಮಿತಿಯನ್ನು ನೇಮಿಸಿತು. ಈ ಐವರ ಸಮಿತಿ ಮೈಸೂರನ್ನೊಳಗೊಂಡ ಕರ್ನಾಟಕ ರಾಜ್ಯವನ್ನು ನಿರ್ಮಿಸಬೇಕೆಂದು ಹೇಳಿದರು. ಇದನ್ನು ಸಾಧಿಸಬೇಕಾದಲ್ಲಿ ಈಗಿನ ಪ್ರಾಂತಗಳ ಪ್ರದೇಶವನ್ನು ಸಂಸ್ಥಾನ ಪ್ರದೇಶಗಳಲ್ಲಿ ವಿಲೀನಗೊಳಿಸಬಾರದು. ಈ ಸಂಸ್ಥಾನಗಳು ವ್ಯವಹಾರಕವಾಗಿ ತಮ್ಮ ಅಸ್ತಿತ್ವವನ್ನು ಕಳೆದುಕೊಳ್ಳಬೇಕಾಗುತ್ತದೆ. ಇದರ ಬಗೆಗೆ ಮೈಸೂರಿನಲ್ಲಿ ಪರ ಹಾಗೂ ವಿರುದ್ಧ ಅಭಿಪ್ರಾಯಗಳು ವ್ಯಕ್ತಪಟ್ಟವು. ಮಹಾರಾಜರು ಹೋಗುತ್ತಾರೆಂದು ಕೆಲವರು ಅಂಜಿಕೆ ವ್ಯಕ್ತಪಡಿಸಿದರು. ಇನ್ನು ಕೆಲವರು ಮಹಾರಾಜರ ಪ್ರಶ್ನೆ ಮುಂದೆ ಮಾಡಿಕೊಂಡು ಕರ್ನಾಟಕ ಪ್ರಾಂತ ರಚನೆಯನ್ನು ಮುಂದಕ್ಕೆ ದೂಡಬಾರದೆಂದು ಆತಂಕ ವ್ಯಕ್ತಪಡಿಸಿದರು.[3]

ಆ ವೇಳೆಯಲ್ಲಿ ಮೈಸೂರಿನ ಮಂತ್ರಿಮಂಡಲದಲ್ಲೂ ಭಿನ್ನಾಭಿಪ್ರಾಯಗಳು ತಲೆದೋರಿತು. ಸಚಿವರುಗಳಾದ ಎ.ಜಿ.ರಾಮಚಂದ್ರರಾಯರು ಕಡಿದಾಳ್‌ಮಂಜಪ್ಪ, ಟಿ.ಚನ್ನಯ್ಯ ಪತ್ರಿಕೆಗಳಿಗೆ ಜಂಟಿ ಹೇಳಿಕೆಯನ್ನು ಕೊಟ್ಟು ಸಂಯುಕ್ತ ಕರ್ನಾಟಕದಲ್ಲಿ ಮೈಸೂರು ಐಕ್ಯವಾಗುವುದನ್ನು ವಿರೋಧಿಸಿದರು. ಹೈದರಾಬಾದ್ ಮತ್ತು ವಿದರ್ಭಗಳಿಗೆ ಕೊಟ್ಟಿರುವ ಸೌಲಭ್ಯವನ್ನು ಮೈಸೂರಿಗೆ ತಪ್ಪಿಸಲಾಗಿದೆಯೆಂದೂ, ಆ ಎರಡು ಸಂಸ್ಥಾನಗಳ ಜನಸಂಖ್ಯೆಯನ್ನು ಮೈಸೂರಿನದಕ್ಕಿಂತ ಕಡಮೆಯೆಂದೂ, ಸಂಸ್ಥಾನದ ಆಳರಸರು ಅನೇಕ ವರ್ಷಗಳಿಂದಲೂ ಒಂದೇ ಸಮನೆ ಶ್ರಮಿಸಿ ಮಹಾಸಂಸ್ಥಾನವನ್ನಾಗಿ ಮಾಡಿರುವ ಮೈಸೂರನ್ನು ಭಾರತದ ಚಿತ್ರದಿಂದ ಈಗ ತೆಗೆದು ಹಾಕಲಾಗಿದೆಯೆಂದೂ ಮೈಸೂರು ಎಂಬ ಹೆಸರನ್ನು ಸಹ ಉಳಿಯಗೊಂಡಿಲ್ಲವೆಂದು ಸಚಿವರುಗಳು ಹೇಳಿದರು.[4]

## ಮೈಸೂರು ಜನರ ವರ್ತನೆ

ಮೈಸೂರು ತನ್ನದೇಯಾದ ಪ್ರಾಕೃತಿಕ ಮತ್ತು ನೈಸರ್ಗಿಕ ಅಂಶಗಳಿಂದ ಹಾಗೂ ಕರಾವಳಿಯಿಲ್ಲದ ಭೂ ಕುಸಿತ ರಾಜ್ಯವು ತುಲನಾತ್ಮಕವಾಗಿ ಉತ್ತಮ ಆಡಳಿತವನ್ನು ಹೊಂದಿತ್ತು. ಜನರು ತೃಪ್ತರಾಗಿದ್ದರು ಮತ್ತು ಸಾಹಸ ಮನೋಭಾವವನ್ನು ಹೊಂದಿರುವುದಿಲ್ಲ. ಮೈಸೂರು ಹೊರಗಿನ ಕನ್ನಡ ಮಾತನಾಡುವ ಜನರಂತೆ ಅವರು ಆಡಳಿತದಲ್ಲಿ ಬಳಲುತ್ತಿಲ್ಲ. ಮೈಸೂರಿನ ಜನರು ಕರ್ನಾಟಕ ರಚನೆಗೆ ನಿರಾಸಕ್ತಿ ಹೊಂದಿದ್ದರು ಮತ್ತು ಕರ್ನಾಟಕ ರಚನೆಯ ಬಗ್ಗೆ ಅವರಿಗೆ ಖಚಿತವಾದ ಅಭಿಪ್ರಾಯಗಳು ಇರಲಿಲ್ಲ. ಸಾಹಿತ್ಯಾಸಕ್ತರು ಮಾತ್ರ ಕನ್ನಡದ ರಚನೆಯನ್ನು ಒಮ್ಮೆ ಬೆಂಬಲಿಸಿದರು ಮತ್ತು ಮೈಸೂರಿನ ಜನರು ಪ್ರತಿದಿನ ಬೆಳಿಗ್ಗೆ "ಉದಯವಾಗಲಿ ನಮ್ಮ ಚಲುವ ಕನ್ನಡನಾಡು" ಎಂಬ ಗೀತೆಯನ್ನು ರೇಡಿಯೋ ಮೂಲಕ ಕೇಳುತ್ತಿದ್ದರು. ಇದು ಮೈಸೂರು ಗೋದಾವರಿ ಮತ್ತು ಕೃಷ್ಣಾನದಿಯ ಗಡಿಯವರೆಗೆ ವಿಸ್ತರಿಸಬಹುದು ಎಂಬ ಮಹಾನ್ ಕಲ್ಪನೆಯನ್ನು ಸೂಚಿಸುತ್ತದೆ.[5] ಮೈಸೂರಿನ ಹೊರಗೆ ಕರ್ನಾಟಕ ರಚನೆಗಾಗಿ ಆಂದೋಲನ ನಡೆಸುತ್ತಿದ್ದ ಕನ್ನಡಿಗರು ಕೂಡ ಮೈಸೂರು ಕರ್ನಾಟಕಕ್ಕೆ ಸೇರುವ ಆಶಾಭಾವನೆಯನ್ನು ಹೊಂದಿರಲಿಲ್ಲ ಮತ್ತು ಅವರು ಕರ್ನಾಟಕ ರಚನೆಯ ಬಗ್ಗೆ ಎಷ್ಟು ಉತ್ಸುಕರಾಗಿದ್ದರು. ಅವರು ಮೈಸೂರಿಗೆ ಬಗ್ಗೆ ಸುಮ್ಮನೆ ತಲೆಕೆಡಿಸಿಕೊಳ್ಳಲಿಲ್ಲ. INC ರೂಪಿಸಿದ ಭಾಷಾವಾರು ಪ್ರಾಂತ್ಯಗಳ ರಚನೆಯ ತತ್ವವನ್ನು ಮೈಸೂರು ಕಾಂಗ್ರೆಸ್ ಯಾವಾಗಲೂ ಒಪ್ಪಿಕೊಂಡಿತ್ತು.

ಏಕೀಕರಣ ಬಗೆಗೆ ಒತ್ತಾಯಿಸಿ ಮೈಸೂರು ಸಂಸ್ಥಾನದ ಹೊರಗಿನ ಕನ್ನಡ ಪ್ರದೇಶಗಳ ಪರಿಸ್ಥಿತಿಯನ್ನು ಅಧ್ಯಯನ ಮಾಡಿ ವರದಿ ನೀಡಲು ಆರು ಜನರ ಒಂದು ಸಮಿತಿಯನ್ನು ನೇಮಿಸಿದರು. ಆ ಸಮಿತಿಯಲ್ಲಿ ಟಿ.ಸಿದ್ದಲಿಂಗಯ್ಯ, ಟಿ.ಸುಬ್ರಮಣ್ಯ, ಎಸ್.ಚನ್ನಯ್ಯ, ಮಂಡ್ಯದ ಎ.ಜಿ. ಬಂದೀಗೌಡ ಅವರಿದ್ದರು. ಇವರು ಕರ್ನಾಟಕ ಎಲ್ಲೆಡೆಯಲ್ಲೂ ಪ್ರವಾಸವನ್ನು ಆರಂಭಿಸಿದರು. ಪ್ರವಾಸದ ನಂತರ 1949 ರಲ್ಲಿ ಸಮಿತಿಯು ತನ್ನ ವರದಿಯನ್ನು ಸಲ್ಲಿಸಿತು. ಆ ವೇಳೆಗೆ ಜೆ.ವಿ.ಪಿ. ಸಮಿತಿಯ ನೇಮಕವೂ ಆಗಿದ್ದುದರಿಂದ ವರದಿಯಲ್ಲಿ ಅದರ ಬಗೆಗೂ ಪ್ರಸ್ತಾಪಿಸಲಾಯಿತು. ವರದಿಯು ಕನ್ನಡ ಜನತೆಯ ಹಿತದ ದೃಷ್ಟಿಯಿಂದ ಬೆಂಗಳೂರು ರಾಜಧಾನಿಯಾಗಿರುವ ಮತ್ತು ಮೈಸೂರು ಸಂಸ್ಥಾನವನ್ನೊಳಗೊಂಡ ಸಂಯುಕ್ತ ಕರ್ನಾಟಕ ರಚನೆಯ ಅವಶ್ಯವೆಂದು ಶಿಫಾರಸು ಮಾಡಿತು. ಹಾಗೆ ರಚಿತವಾದ ಕರ್ನಾಟಕವು ಆರ್ಥಿಕವಾಗಿ ಸ್ವಯಂ ಪೂರ್ಣವಾಗುವುದೆಂಬ ಅಭಿಪ್ರಾಯ ಸಮಿತಿಗಿತ್ತು.[6]

ಈ ಮಧ್ಯೆ ಕರ್ನಾಟಕ ಏಕೀಕರಣದ ಬಗ್ಗೆ ಉತ್ತರ ಕರ್ನಾಟಕದಲ್ಲಿ ಸಂಚರಿಸಿ ಬಂದ ಮೈಸೂರು ಕಾಂಗ್ರೆಸ್‌ನ ಮುಖಂಡರುಗಳಾದ ಎಸ್.ಚನ್ನಯ್ಯ ಮತ್ತು ಎ.ಜಿ.ಬಂದೀಗೌಡರನ್ನು 01.04.1949 ರಂದು ಸಂಜೆ ಪತ್ರಿಕೋದ್ಯಮ ಸಂಘದವರು ಮೈಸೂರಿನಲ್ಲಿ ಬರಮಾಡಿಕೊಂಡು ಸತ್ಕರಿಸಿದರು. ಉತ್ತರ ಕರ್ನಾಟಕದ ಜನರು ಏಕೀಕರಣದ ಬಗ್ಗೆ ಬಹಳ ಉತ್ಸಾಹಶಾಲಿಗಳಾಗಿ ರುವವರು. ಕರ್ನಾಟಕ ಏಕೀಕರಣವಾದ ನಂತರ ಮೈಸೂರಿನ ಮಹಾರಾಜರು ಕರ್ನಾಟಕಕ್ಕೆ ಗೌರ್ನರ್ ಅಥವಾ ಶಾಸನಬದ್ಧ ಅಧಿಪತಿಗಳಾಗಿರಲು ಅವರದೇನೂ ಅಭ್ಯಂತರವಿಲ್ಲ. ಕರ್ನಾಟಕ ಏಕೀಕರಣವನ್ನು ಆದಷ್ಟು ಜಾಗ್ರತೆಯಿಂದ ತ್ವರಿತಗೊಳಿಸಬೇಕೆಂದು ಅಭಿಪ್ರಾಯಪಟ್ಟರು. ಮೈಸೂರು ಸಂಸ್ಥಾನದಿಂದ ವಿದ್ಯುಚ್ಛಕ್ತಿಯನ್ನು ಒದಗಿಸಿದರೆ ಮುಂದುವರೆದಿರುವ ಮೈಸೂರು ಸಂಸ್ಥಾನದ ಮಟ್ಟಕ್ಕೆ

ಕರ್ನಾಟಕದ ಭಾಗಗಳೆಲ್ಲವೂ ಬರುವುದು ಕರ್ನಾಟಕ ಏಕೀಕರಣವಾದ ನಂತರ ಅದರ ಆದಾಯವು 18 ಕೋಟಿ ರೂ.ಗಳಾಗುವುದು. 30 ಜಿಲ್ಲೆಗಳ ಆಡಳಿತ ನಡೆಸಲು ಈ ಹಣವು ಸಾಕಾಗುವುದು. ಪಶ್ಚಿಮಘಟ್ಟದಲ್ಲಿನ ಕಾಳಿನದಿಯಲ್ಲಿ ವಿದ್ಯುತ್ ಅನ್ನು ತಯಾರು ಮಾಡುವುದಾದರೆ ಇಡೀ ಕರ್ನಾಟಕಕ್ಕೆ ಬೇಕಾಗುವ ವಿದ್ಯುಚ್ಛಕ್ತಿಯು ಸಿಗುವುದು. ಬಿಜಾಪುರದಲ್ಲಿನ 5 ನದಿಗಳ ನೀರಾವರಿ ಯೋಜನೆಗಳನ್ನು ನಡೆಸಿದರೆ ಆಹಾರದ ವಿಷಯದಲ್ಲೂ ಸಹ ಕರ್ನಾಟಕವು ಸ್ವಪರಿಪೂರ್ಣತೆಯಿಂದ ಕೂಡಿರುವುದು. ಕಾರವಾರದ ಬಂದರು, ಗೋಕಾಕ್‌ನ ಅರಣ್ಯ ಸಂಪತ್ತು ಇವೆಲ್ಲವನ್ನೂ ಸರಿಯಾಗಿ ಉಪಯೋಗಿಸಿದರೆ ಕರ್ನಾಟಕಕ್ಕೆ ಯಾವುದೇ ತೊಂದರೆಯಾಗದು. ಕಮ್ಯೂನಿಷ್ಟರ ತತ್ವವನ್ನು ಪ್ರತಿಪಾದಿಸುವ ಕೆಲವರು ಮಾತ್ರ ಮಹಾರಾಜರ ಅಧಿಕಾರದ ಬಗ್ಗೆ ಅಸಮ್ಮತಿ ಸೂಚಿಸುತ್ತಿರುವವರೆಂದರು.[7]

## ಶಾಸನ ಸಭೆಯಲ್ಲಿ ಏಕೀಕರಣದ ಪರ–ವಿರೋಧ ನಿಲುವುಗಳು

ಏಕೀಕರಣದ ಬಗ್ಗೆ ಸದನದಲ್ಲೂ ಪರ–ವಿರೋಧ ನಿಲುವುಗಳು ವ್ಯಕ್ತವಾಗಿದ್ದವು. ಶಾಸನ ಸಭೆಯ ಸದಸ್ಯರಾದ ಶ್ರೀರಂಗಪಟ್ಟಣದ ಕೆ.ಪುಟ್ಟಸ್ವಾಮಿ ಅವರು 27 ಜುಲೈ 1953 ರಂದು ಶಾಸನ ಸಭೆಯಲ್ಲಿ ಬಳ್ಳಾರಿಯನ್ನು ಮೈಸೂರಿಗೆ ಸೇರಿಸುವ ಮತ್ತು ಏಕೀಕರಣ ಕುರಿತು ಈ ರೀತಿಯಾಗಿ ಅಭಿಪ್ರಾಯ ವ್ಯಕ್ತಪಡಿಸಿದರು. ಬಳ್ಳಾರಿಯನ್ನು ಮೈಸೂರಿಗೆ ಸೇರಿಸುವ ವಿಚಾರದ ಮಸೂದೆಯನ್ನು ಸ್ವಾಗತಿಸುತ್ತೇನೆ. ಸಭೆಯಲ್ಲಿ ಕೆ.ಹನುಮಂತಯ್ಯನವರು ಮಂಗಳೂರಿಗೆ ಹೋಗಿದ್ದಾಗ ಕೇಂದ್ರ ಸರ್ಕಾರದವರು ಇಷ್ಟಪಟ್ಟರೆ ಕರ್ನಾಟಕ ಏಕೀಕರಣವನ್ನು ಕೇವಲ 24 ಗಂಟೆಗಳಲ್ಲೇ ಮಾಡಬಹುದೆಂಬುದಾಗಿ ಅಭಿಪ್ರಾಯಪಟ್ಟರೆಂಬುದಾಗಿ ಪತ್ರಿಕೆಗಳಲ್ಲಿ ವರದಿಯಾಗಿತ್ತು. ಇಡೀ ದೇಶದ ಅಭಿಪ್ರಾಯವೇ ಆ ರೀತಿಯಾಗಿರುತ್ತದೆಯೋ ಏನೋ ಅನ್ನುವ ರೀತಿಯಲ್ಲಿ ಮಾತನಾಡಿದ್ದಾರೆ. ಆದರೆ ಈ ದೇಶದ ಮೇಲ್ಮನೆಯಲ್ಲಿ ಮಾತನಾಡುತ್ತಾ ಕರ್ನಾಟಕ ಏಕೀಕರಣದ ವಿಚಾರವಾಗಿ ಯಾರೂ ಉದ್ರೇಕವಾದ ಭಾಷಣಗಳನ್ನು ಮಾಡಬಾರದೆಂದೂ, ಈ ದೇಶ ಕನ್ನಡ, ತೆಲಗು, ತಮಿಳು ಮಾತನಾಡತಕ್ಕಂಥವರ ದೇಶವಾಗಿದೆ ಎಂದೂ ಇದು ಮಿಶ್ರ ಭಾಷೆಗಳ ದೇಶವಾಗಿಯೇ ಉಳಿಯಬೇಕು. ಈ ದೇಶಕ್ಕೆ ಯಾವ ಭಾಷೆಯನ್ನಾಡತಕ್ಕ ಜನರು ಬಂದಾಗ್ಯೂ ಅವರನ್ನು ನಾವು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇವೆ ಎಂದೂ ಹೇಳಿದ್ದಾರೆ.[8]

**ಬಳ್ಳಾರಿ ವಿಲೀನ ಅಕ್ಟೋಬರ್–1953**

1953 ರ ಅಕ್ಟೋಬರ್‌ನಲ್ಲಿ ಆಂಧ್ರ ರಚನೆ ಹಾಗೂ ಅದೇ ದಿನ ಬಳ್ಳಾರಿಯ ಭಾಗವನ್ನು ಮೈಸೂರಿನಲ್ಲಿ ಭಾಷಾವಾರು ವಿಲೀನಗೊಳಿಸಲಾಯಿತು. ಅಕ್ಟೋಬರ್ 2.1953 ರಂದು ಬಳ್ಳಾರಿಯಲ್ಲಿ 30,000 ಜನರನ್ನು ಉದ್ದೇಶಿಸಿ ಹನುಮಂತಯ್ಯ ಅವರು "ಬಳ್ಳಾರಿ ವಿಲೀನವು ಕರ್ನಾಟಕ ಏಕೀಕರಣದ ಆರಂಭ" ಎಂದು ಹೇಳಿದರು. ಎಲ್ಲಾ ಜನರು ಇದನ್ನು ಕರ್ನಾಟಕ ಏಕೀಕರಣದ ಮೊದಲ ಹೆಜ್ಜೆ ಎಂದು ಶ್ಲಾಘಿಸಿದರು. ಇದು ಕರ್ನಾಟಕದ ಉದ್ದೇಶಕ್ಕೆ ಸಂಕೇತ ಎಂದು ಸದಸ್ಯರು ಹೇಳಿದರು.[9] ಕೆಲವರನ್ನು ಹೊರತುಪಡಿಸಿ ಮೈಸೂರಿನ ಜನರು ಕರ್ನಾಟಕ ರಚನೆಯನ್ನು ದೃಷ್ಟೀಕರಿಸಲಿಲ್ಲ. ಮತ್ತು ಬಳ್ಳಾರಿ ಸೇರ್ಪಡೆಯ ವಿರುದ್ದ ಅಥವಾ ಕರ್ನಾಟಕ ರಚನೆಯ ವಿರುದ್ದ ಯಾವುದೇ ವಿರೋಧವಿರಲಿಲ್ಲ.

ಅಕ್ಟೋಬರ್ 1953 ರಂದು ಬಳ್ಳಾರಿ ಜಿಲ್ಲೆಯ 7 ತಾಲ್ಲೂಕುಗಳು ಮೈಸೂರು ರಾಜ್ಯದೊಂದಿಗೆ ವಿಲೀನವಾಗುತ್ತದೆ. ಮೈಸೂರು ಪ್ರದೇಶ ಕಾಂಗ್ರೆಸ್ ಅಧ್ಯಕ್ಷರಾದ ಹೆಚ್.ಕೆ. ವೀರಣ್ಣಗೌಡರು. ದಾವಣಗೆರೆ ಪತ್ರಿಕೋದ್ಯೋಗಿಗಳೊಡನೆ ಮಾತನಾಡುತ್ತಾ ಆಡಳಿತ, ದಕ್ಷತೆ, ಆರ್ಥಿಕ ಸುಭದ್ರತೆ ಮುಂತಾದ ವಿಷಯಗಳನ್ನು ಗಮನಿಸಿ ಒಂದೇ ಕರ್ನಾಟಕ ಪ್ರಾಂತವನ್ನು ಮಾಡುವುದರ ಬದಲು ಎರಡು ಕನ್ನಡ ಸಂಸ್ಥಾನಗಳನ್ನು ಹೊಂದುವುದು ಉತ್ತಮವೆಂದು ಮೈಸೂರು ಸಂಸ್ಥಾನದಲ್ಲಿ ಅನೇಕರು ಅಭಿಪ್ರಾಯಪಟ್ಟಿರುವುದಾಗಿ ತಿಳಿಸಿದರು. ಭಾಷಾವಾರು ಪ್ರಾಂತಗಳ ರಚನಗೆ ಮೈಸೂರಿನವರ ವಿರೋಧವಿಲ್ಲವೆಂದು ಬಳ್ಳಾರಿ, ದಕ್ಷಿಣ ಕನ್ನಡ, ಅಥವಾ ಕೊಡಗನ್ನು ಮೈಸೂರಿಗೆ ಸೇರಿಸಿ, ಉಳಿದ ಕನ್ನಡ ಭಾಗಗಳನ್ನು ಪ್ರತ್ಯೇಕ ಕನ್ನಡ ರಾಜ್ಯವಾಗಿ ಮಾಡಬಹುದೆಂದು ಸಲಹೆ ನೀಡಿದರು.[10]

## ನಾನಲ್ ಕಾಂಗ್ರೆಸ್

1953 ರ ಜನವರಿ ತಿಂಗಳಿನಲ್ಲಿ ಭಾರತ ರಾಷ್ಟ್ರೀಯ ಕಾಂಗ್ರೆಸ್‌ನ ವಾರ್ಷಿಕಾಧಿವೇಶನವು ಹೈದರಾಬಾದಿನ ನಾನಲ್ ನಗರದಲ್ಲಿ ಸಮಾವೇಶಗೊಂಡಿತ್ತು. ಕಾಂಗ್ರೆಸ್ ವಿಷಯ ನಿಯಮಾಕ ಸಮಿತಿಯಲ್ಲಿ ಭಾಷಾವಾರು ಪ್ರಾಂತಗಳ ಬಗ್ಗೆ ಕಾರ್ಯಕಾರಿ ಸಮಿತಿ ನಿರ್ಣಯವು ಅಂಗೀಕೃತಗೊಂಡು ನಿರ್ಣಯದ ಬಗ್ಗೆ ರಾಜಾಜಿಯವರು ಮಾತನಾಡಿ ಭಾಷಾವಾರು ಪ್ರಾಂತ ರಚನೆಯ ಭಾವನೆಯು ಕುಲಗೋತ್ರದವರ ಭಾವನೆಯ ಪ್ರತೀಕವೆಂದು ತಿಳಿಸಿದರು. ಆ ಭಾವನೆಯಿಂದ ಪ್ರಜಾಪ್ರಭುತ್ವ ಸರ್ಕಾರದ ಸ್ಥಾಪನೆವರೆಗೆ ನಾಗರೀಕತೆಯು ವೃದ್ಧಿಗೊಂಡಿರುವು ದೆಂದು ಅವರು ಅಭಿಪ್ರಾಯಪಟ್ಟರು. ನಿರ್ಣಯವನ್ನು ಎಸ್. ವಿ. ಗಾಡ್ಗಿಲ್ ಅವರು ಮಂಡಿಸಿ ದಾಗ ಹಾಸನದ ಹಾರನಹಳ್ಳಿ ರಾಮಸ್ವಾಮಿಯವರು ಕೂಡಲೇ ಮೈಸೂರು ಸಂಸ್ಥಾನಕ್ಕೆ ಕರ್ನಾಟಕ ಜಿಲ್ಲೆಗಳನ್ನು ಸೇರಿಸಬೇಕೆಂದು ತಿಳಿಸಿದರು. ಕರ್ನಾಟಕಕ್ಕೆ ಮೈಸೂರು ಸೇರುವುದಿಲ್ಲವೆಂದು ಹೇಳುವವರ ಮಾತನ್ನು ನಂಬಬಾರದೆಂದು ಹೇಳಿದರು. ಅದರಲ್ಲಿ ಮೈಸೂರು ರಾಜ್ಯದ ಮುಖ್ಯಮಂತ್ರಿ ಕೆ.ಹನುಮಂತಯ್ಯನವರು ಪಾಲ್ಗೊಂಡಿದ್ದರು. ಅವರು ಸಾಂಸ್ಕೃತಿಕವಾಗಿ, ಭಾಷಿಕವಾಗಿ ಸಮಾನತೆಯುಳ್ಳ ಪ್ರದೇಶಗಳನ್ನು ಆರ್ಥಿಕಾನುಕೂಲಗಳನ್ನು ಲಕ್ಷ್ಯದಲ್ಲಿರಿಸಿಕೊಂಡು ವಿಲೀನಗೊಳಿಸಿ ಭಾಷಾವಾರು ಪ್ರಾಂತ ರಚನೆ ಮಾಡುವುದು ಅಗತ್ಯ ಮತ್ತು ಅನಿವಾರ್ಯವೆಂದು ಮೈಸೂರು ರಾಜ್ಯದ ಜೊತೆಗೆ ಅದರ ನೆರೆಯ ಕನ್ನಡ ಪ್ರದೇಶಗಳನ್ನೆಲ್ಲ ಸೇರಿಸಿ ಏಕೀಕೃತ ಕರ್ನಾಟಕ ರಚನೆ ಬಹುಮುಖ್ಯವೆಂದೂ ಪ್ರಬಲವಾಗಿ ಪ್ರತಿವಾದಿಸಿದರು. ಕರ್ನಾಟಕ ಏಕೀಕರಣ ವಿಷಯದಲ್ಲಿ ಮೈಸೂರು

ಎಂದೂ ಅಡ್ಡಿಯಾಗಿಲ್ಲ ಎಂದು ಕಾಂಗ್ರೆಸ್‌ನ ರಾಷ್ಟ್ರೀಯ ನಾಯಕರಿಗೆ ಮುಖಾಮುಖಿ ಸ್ಪಷ್ಟಪಡಿಸಿದರು. ಹೆಚ್.ಸಿ.ದಾಸಪ್ಪನವರು ಮಾತನಾಡಿ 600 ಸಂಸ್ಥಾನಗಳನ್ನು ಒಂದೇ ಬಾರಿಗೆ ಒಂದುಗೂಡಿಸುವಾಗ ಕೇಂದ್ರ ಸರ್ಕಾರವು ಪ್ರಜಾಭಿಪ್ರಾಯಬೇಕೆಂದು ಮೀನಮೇಷವನ್ನು ಎಣಿಸಲಿಲ್ಲವೆಂದೂ, ಮೈಸೂರಿನಲ್ಲಿ ಪಕ್ಕದ ಪ್ರದೇಶವನ್ನು ಸೇರಿಸಲು ಅಲ್ಲಿನ ಜನರ ಸೌಹಾರ್ದವು ಅವಶ್ಯಕವೆಂದೂ, ಮೈಸೂರಿನ ಶಾಸನ ಸಭೆಯ 52 ಮಂದಿ ಸದಸ್ಯರು ಕರ್ನಾಟಕ ಪ್ರಾಂತ ಬೇಡವೆಂದು ತಿಳಿಸಿರುವುದಾಗಿಯೂ, ಮೈಸೂರು ಕರ್ನಾಟಕಕ್ಕೆ ಸೇರಲು ತಯಾರಾಗಿರುವುದೆಂಬ ಮಾತಿಗೆ ತಾವು ಸವಾಲು ಹಾಕುವುದಾಗಿಯೂ ಹೇಳಿದರು.[11]

ಕರ್ನಾಟಕ ಪ್ರಾಂತ ರಚನೆಗೆ ವಿರೋಧ ವ್ಯಕ್ತಪಡಿಸಿ ಹೇಳಿಕೆ ನೀಡಿದ ಶಾಸನಸಭೆಯ ಸದಸ್ಯ, ಮೈಸೂರು ಪ್ರದೇಶ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸದಸ್ಯರಾದ ಎನ್.ಸಿ. ನಾಗಯ್ಯರೆಡ್ಡಿಯವರು ಕರ್ನಾಟಕ ಏಕೀಕರಣಕ್ಕೆ ಮೈಸೂರು ಸಂಸ್ಥಾನ ಶೇ.95 ರಷ್ಟು ವಿರೋಧಿಸಿರುವುದಾಗಿ ಹೇಳಿರುತ್ತಾರೆ. ಮೈಸೂರನ್ನು ಈಗ ಇರುವಂತೆಯೇ ಇರಗೂಡಬೇಕೆಂದು ಎಲ್ಲರ ಅಭಿಮತವಾಗಿರುವುದೆಂದೂ, ಮೈಸೂರಿನ ಅಸ್ತಿತ್ವವನ್ನು ರಕ್ಷಿಸಿ, ಉಳಿಸಿಕೊಂಡು ಬರುವುದೇ ಪ್ರತಿಯೊಬ್ಬರ ಆಶಯವಾಗಿರುವುದೆಂದೂ ಅವರು ಹೇಳಿ 24 ಗಂಟೆಯೊಳಗೆ ಕರ್ನಾಟಕ ಪ್ರಾಂತದ ರಚನೆಯು ಸಾಧ್ಯವೆಂದು ಮುಖ್ಯಮಂತ್ರಿ ಕೆ.ಹನುಮಂತಯ್ಯ ಅವರು ಹೇಳಿರುವುದನ್ನು ಟೀಕಿಸಿ, ಇದರಿಂದ ಕೆ.ಹನುಮಂತಯ್ಯನವರಿಗೆ "ತಿಳಿಯಾದ ದೃಷ್ಟಿ" ಇಲ್ಲವೆಂದು ವ್ಯಕ್ತವಾಗುವು ದೆಂದೂ, ತಿಳುವಳಿಕೆಯಿಲ್ಲದೆ ಅಧಿಕಾರವನ್ನು ಹೊಂದುವುದರಿಂದ ದೇಶವನ್ನು ನಾಶಕ್ಕೆ ಕರೆದೊಯ್ದಂತಾಗುವುದೆಂದೂ ಹೇಳಿದರು.[12]

ತುಮಕೂರು ಜಿಲ್ಲೆಯ ಪ್ರಜಾ ಸಮಾಜವಾದಿ ಪಕ್ಷದ ಸಭೆಯ ಆಂಧ್ರ ಪ್ರಾಂತ್ಯ ಮತ್ತು ಕರ್ನಾಟಕ ಪ್ರಾಂತ್ಯಗಳನ್ನು ಏಕಕಾಲದಲ್ಲಿ ರಚಿಸಬೇಕೆಂದು ಒತ್ತಾಯಪಡಿಸಲು ನಿರ್ಣಯ ಮಾಡಲಾಯಿತು. ಆಂಧ್ರ ಪ್ರಾಂತ್ಯವನ್ನು ರಚಿಸುವುದಕ್ಕೆ ಮುಂದಾಗಿದ್ದು, ಬಳ್ಳಾರಿ ಜಿಲ್ಲೆಯ ಆಲೂರು, ರಾಯದುರ್ಗ ಮತ್ತು ಆದವಾನಿಗಳ ಭವಿಷ್ಯವನ್ನು ನಿರ್ಧರಿಸಬೇಕೆಂದೂ ಮತ್ತು ಅದಕ್ಕಾಗಿ ಒಂದು ಸಮಿತಿಯನ್ನು ರಚಿಸಬೇಕೆಂದೂ ಒತ್ತಾಯಪಡಿಸಲಾಯಿತು. ಬಳ್ಳಾರಿ ತಾಲ್ಲೂಕು ಕನ್ನಡ ಮಾತನಾಡುವ ಒಂದು ಪ್ರಮುಖ ಪ್ರದೇಶವಾದ್ದರಿಂದ ಅದನ್ನು ಮೈಸೂರಿಗೇ ಸೇರಿಸಬೇಕೆಂದೂ ಅಭಿಪ್ರಾಯಪಡಲಾಯಿತು. ಆಂಧ್ರಪ್ರಾಂತ್ಯದೊಡನೆಯೇ ಕರ್ನಾಟಕ ಪ್ರಾಂತ್ಯವನ್ನೂ ರಚಿಸದಿದ್ದರೆ ಅಹಿಂಸಾಯುತವಾದ ಹೋರಾಟವನ್ನು ಆರಂಭಿಸಿ ಕರನಿರಾಕರಣೆ, ಸಾಮೂಹಿಕ ಹರತಾಳ, ಶಾಲೆಗಳ ಪಿಕೆಟಿಂಗ್ ಇವುಗಳಿರುವ ಕಾನೂನು ಭಂಗ ಚಳುವಳಿ ಕೈಗೊಳ್ಳಲು ನಿರ್ಧರಿಸಲಾಯಿತು.[13]

ಇತ್ತ ಹಳೆ ಮೈಸೂರಿನಲ್ಲಿ ಕನ್ನಡ ಜನ ಸಮದೃಷ್ಟಿಯಿಂದ ಒಂದಾಗಬೇಕೆಂದು ಎಸ್.ಗೋಪಾಲಗೌಡರ ಅಭಿಪ್ರಾಯವಾಗಿತ್ತು. 19.03.1954 ರಂದು ಮೈಸೂರು ಶಾಸನ ಸಭಾ ಸದಸ್ಯರ ಗೌರವಾರ್ಥ ಕರ್ನಾಟಕ ಪ್ರಾಂತ ರಚನಾ ಸಮಿತಿಯವರು ಏರ್ಪಡಿಸಿದ್ದ ಸತ್ಕಾರ ಸಮಾರಂಭದಲ್ಲಿ ಮೈಸೂರಿನ ಶಾಸಕರೆಲ್ಲರೂ ಕರ್ನಾಟಕ ಏಕೀಕರಣ ಬಗೆಗೆ ಆಶಾಭಾವನೆಯನ್ನು ವ್ಯಕ್ತಪಡಿಸಿದರು. ಏಕೀಕರಣಕ್ಕೆ ಮೈಸೂರು ಅಡ್ಡಿಯಾಗಿಲ್ಲ ಎಂದು ಮುಖ್ಯಮಂತ್ರಿ ಕೆ.ಹನುಮಂತಯ್ಯನವರೇ ಸ್ಪಷ್ಟಪಡಿಸಿದ್ದರೂ, ರಾಜಪ್ರಮುಖರೂ ಆ ಬಗೆಗೆ ಉತ್ಸಾಹದಿಂದಿದ್ದರೂ ಕೆಲವರಿಗೆ ಇನ್ನೂ ಆ ಸಂಶಯ ಇದ್ದುದನ್ನು ಮತ್ತು ಅದನ್ನು ಘೋಷಿಸುವಂತೆ ಕೆಲವು ನಾಯಕರು ಹೇಳಿಕೆ ನೀಡುತ್ತಿದ್ದುದನ್ನು ಉಪೇಕ್ಷಿಸುವಂತಿಲ್ಲ. 1954 ಮಾರ್ಚಿ 28 ರಂದು ಬೆಂಗಳೂರಿನಲ್ಲಿ ನಡೆದ ಸಂಸ್ಥಾನದ ಒಕ್ಕಲಿಗ ಮುಖಂಡರ ಸಮ್ಮೇಳನವು ಮೈಸೂರನ್ನೊಳಗೊಂಡ ಕರ್ನಾಟಕ ನಿರ್ಮಾಣವನ್ನು ವಿರೋಧಿಸಿದ್ದನ್ನು ಇಲ್ಲಿ ನೆನೆಯಬಹುದು.[14]

1955ನೇ ಇಸವಿಯಲ್ಲಿ ಮೈಸೂರು ಪ್ರಜಾಪ್ರತಿನಿಧಿ ಸಭೆಯ ಅಧಿವೇಶನವೊಂದು ಮೈಸೂರು ಕ್ರಾಫರ್ಡ್ ಹಾಲ್‌ನಲ್ಲಿ ನಡೆಯಿತು. ಅಲ್ಲಿ ಕೆ.ಪುಟ್ಟಸ್ವಾಮಿ ಹಾಗೂ ಎ.ವಿ. ನರಸಿಂಹರೆಡ್ಡಿ ಹೆಚ್.ಕೆ.ವೀರಣ್ಣಗೌಡರು ಭೇಟಿ ಮಾಡಿ ಏಕೀಕರಣ ವಿಚಾರದಲ್ಲಿ ನಿರ್ಲಿಪ್ತತೆ ಸಾಧುವಲ್ಲ. ಇದನ್ನು ಉಗ್ರವಾಗಿ ಪ್ರತಿಭಟಿಸಬೇಕು. ಇಲ್ಲವಾದರೆ ನಾವು ಮೈಸೂರನ್ನು ಮಾರಿಕೊಂಡಂತಾಗುತ್ತದೆಂದು ತಿಳಿಸಿದರು. ಆಗ ಹೆಚ್.ಕೆ.ವೀರಣ್ಣಗೌಡರು ಒಂದು ಪಟ್ಟಿಯನ್ನು ತಯಾರಿಸಿ ಬೆಂಬಲ ಕೊಡುವವರನ್ನು ಹೆಸರಿಸಿದರು. ಪ್ರಜಾಪ್ರತಿನಿಧಿ ಸಭೆಯಲ್ಲೂ ಬಹಿರಂಗ ಪ್ರತಿಭಟನೆಯಾದವು. ಮೈಸೂರು ಸರ್ಕಾರ ನಿಯಮಿಸಿದ ವಸ್ತುಸ್ಥಿತಿ ಮಾಪಕ ಸಮಿತಿ (Facts Finding Committee) ಮೈಸೂರು ಸಂಸ್ಥಾನದ ಹೊರಗಿನ ಕನ್ನಡ ಭಾಗಗಳು ಕೊರತೆಯ ಪ್ರದೇಶವಾಗುವವೆಂದು ತಿಳಿಸಿದುದರಿಂದ ಏಕೀಕರಣ ವಿರೋಧಿಸುತ್ತಿದ್ದ ಮೈಸೂರಿಗರ ಸಂಖ್ಯೆ ಹೆಚ್ಚಾಯಿತು. ಈ ವಿರೋಧಿ ನಾಯಕರು ದ್ವಿ ಕರ್ನಾಟಕ ವಾದವನ್ನು ಬೆಂಬಲಿಸಿದರು. ಆ ನಾಯಕರುಗಳಲ್ಲಿ ಪ್ರಮುಖರೆಂದರೆ ಹೆಚ್.ಕೆ.ವೀರಣ್ಣಗೌಡ, ವಿ.ವೆಂಕಟಪ್ಪ, ಎನ್.ಹುಚ್ಚಮಾಸ್ತಿಗೌಡ ಕೆ.ವಿ.ಶಂಕರಗೌಡ, ಪಿ.ಎನ್.ಜವರಪ್ಪಗೌಡ, ಜಿ.ಎಸ್.ಬೊಮ್ಮೇಗೌಡ, ಎಂ.ಪಿ.ಎಲ್.ಶಾಸ್ತ್ರಿ ಮೊದಲಾದವರು ಮೈಸೂರು ಕರ್ನಾಟಕದೊಡನೆ ವಿಲೀನವಾಗುವುದನ್ನು ವಿರೋಧಿಸುತ್ತಿದ್ದರು. ಇವರ ಪ್ರಕಾರ ವಿಲೀನವಾದರೆ ಒಂದು ಪ್ರಬಲ ಕೋಮಿನ ಜನಾಂಗ ಪ್ರಾಬಲ್ಯರಾಗಿ ಹಳೆ ಮೈಸೂರಿಗೆ ಆರ್ಥಿಕವಾಗಿ ತೊಂದರೆಯಾಗುತ್ತದೆಂದು ರಾಜಕೀಯ ಹಾಗೂ ಧಾರ್ಮಿಕ ದೃಷ್ಟಿಯಿಂದಲೂ ದ್ವಿಕರ್ನಾಟಕವಾದವು ಮುಖ್ಯವೆಂದು ತಿಳಿಸಿದರು.[15]

ಈ ಮಧ್ಯೆ ಮೈಸೂರಿನ ಅಸ್ತಿತ್ವವನ್ನು ಉಳಿಸಿಕೊಳ್ಳಬೇಕೆಂದೂ ನೆಹರು ಕೇಂದ್ರ ಗೃಹಮಂತ್ರಿ ಗೋವಿಂದವಲ್ಲಭಪಂತ್, ವಿದ್ಯಾಮಂತ್ರಿ ಮೌಲಾನಾ ಆಜಾದ್ ಮುಂತಾದ ನಾಯಕರಲ್ಲಿ ಒತ್ತಾಯ ಮಾಡಲು ಎನ್.ಹುಚ್ಚಮಾಸ್ತಿಗೌಡ, ಡಿ.ದೇವರಾಜಅರಸು, ನಾಗಪ್ಪಶೆಟ್ಟಿ, ಆರ್.ಕೆ.ಪ್ರಸಾದ್, ಎಲ್.ಟಿ. ಕಾರ್ಲ್ಲೆ, ಹೆಚ್.ಕೆ.ವೀರಣ್ಣಗೌಡ, ಕೆ.ವಿ. ಶಂಕರಗೌಡ, ಎಂ.ಕೆ.ಶಿವನಂಜಪ್ಪ ಅಧಿಕೃತವಾಗಿ ಇವರ ಜೊತೆ ಉಳ್ಳ ಮೈಸೂರು ವಿಲೀನ ವಿರೋಧಿ ನಿಯೋಗವೊಂದು ದೆಹಲಿಗೆ ತೆರಳಿದರು.[16]

### ಮೈಸೂರು ಕಾಂಗ್ರೆಸ್‌ನಲ್ಲಿ ವೈಷಮ್ಯಗಳು

ಕರ್ನಾಟಕ ರಚನೆ ಬಗ್ಗೆ ಮೈಸೂರಿನ ಕಾಂಗ್ರೆಸ್ಸಿಗರಲ್ಲಿ ಭಿನ್ನಾಭಿಪ್ರಾಯಗಳಿದ್ದವು. ಹೆಚ್ಚಿನ ಸಂಖ್ಯೆಯ ಜನರು ಈ ಕ್ರಮವನ್ನು ಬೆಂಬಲಿಸಿದರೆ, ಅಷ್ಟೇ ಅನೇಕ ಪ್ರಮುಖ ನಾಯಕರು ಕರ್ನಾಟಕ ರಚನೆಯನ್ನು ವಿರೋಧಿಸಿದರು. ಮೈಸೂರು ಶಿಕ್ಷಣ, ಆರ್ಥಿಕ ಅಭಿವೃದ್ಧಿಯಲ್ಲಿ ಪ್ರಗತಿ ಸಾಧಿಸಿದೆ ಮತ್ತು ದಕ್ಷ ಆಡಳಿತ ಯಂತ್ರವನ್ನು ಹೊಂದಿದ್ದು, ಇತರ ಪ್ರದೇಶಗಳು ಹೆಚ್ಚಾಗಿ ಹಿಂದುಳಿದ ಪ್ರದೇಶಗಳು ಮೈಸೂರಿನೊಂದಿಗೆ ವಿಲೀನಗೊಂಡರೆ ಪ್ರತಿಕೂಲ ಪರಿಣಾಮ ಬೀರುತ್ತದೆ ಎಂದು ವಿರೋಧಿಗಳು ಅಭಿಪ್ರಾಯಪಟ್ಟರು. ಇದು ಮಾನಸಿಕವಾಗಿ ಒಂದು ಸಮುದಾಯದ ಜನಸಂಖ್ಯೆಯಲ್ಲಿ ಇತರರಿಗೆ ಹಾನಿಯಾಗುವ ಅಪಾಯವಿರುವುದರಿಂದ ಇದು ಚಾಲ್ತಿಯಲ್ಲಿರುವ ಕೋಮು ಸಮತೋಲನವನ್ನು ಕೆಡಿಸುತ್ತದೆ ಎಂದು ಅನೇಕರು ಭಯಪಟ್ಟರು.[17]

ಅದರಂತೆ ಮಂಡ್ಯ ಜಿಲ್ಲೆಯಲ್ಲಿ ಪ್ರಮುಖರ ಸಭೆಯೊಂದು ನಡೆದು ಮೈಸೂರು ಸಂಸ್ಥಾನವು ಪ್ರತ್ಯೇಕವಾಗಿ ಉಳಿಯುವ ಬಗ್ಗೆ ಜನಾಭಿಪ್ರಾಯವನ್ನು ರೂಢಿಸಲು ಸಂಸ್ಥಾನ ಸಮ್ಮೇಳನವೊಂದನ್ನು ಕರೆಯಲು ಸ್ವಾಗತ ಸಮಿತಿಯೊಂದನ್ನು ಕೆ.ವಿ. ಶಂಕರಗೌಡರ ಅಧ್ಯಕ್ಷತೆಯಲ್ಲಿ ರಚಿಸಲಾಗಿತ್ತು. ಈ ಸಮಿತಿಯು 04.12.1955 ರಂದು ಮಂಡ್ಯದಲ್ಲಿ ಸಭೆ ಸೇರಿ ಸಂಸ್ಥಾನದ ಸಮ್ಮೇಳನವನ್ನು ಕರೆಯಲು ನಿರ್ಧರಿಸಿ ಪ್ರಾಂತ ಸಂಸ್ಥಾನವಾಗಿಯೇ ಉಳಿಯಬೇಕೆಂದು ಆತ್ಮಸಾಕ್ಷಿಯಾಗಿ ಇಚ್ಛೆಪಡುವವರು ಸಮ್ಮೇಳನದಲ್ಲಿ ಪ್ರತಿನಿಧಿಗಳಾಗಿ ಭಾಗವಹಿಸಬಹುದೆಂದೂ ಹೇಳಿದರು.[18] ಮೈಸೂರು ಟೌನ್‌ಹಾಲ್ ಮೈದಾನದಲ್ಲಿ ಬಹಿರಂಗ ಸಭೆಯೊಂದು ನಡೆದು ಮೈಸೂರು ಈಗಿರುವಂತೆಯೇ ಉಳಿಯಬೇಕೆಂದು ಸೂಚಿಸುವ ನಿರ್ಣಯವು ಅಂಗೀಕರಿಸಲ್ಪಟ್ಟಿತು. ಶಾಸಕ ಎನ್.ಹುಚ್ಚಮಾಸ್ತಿಗೌಡರು ಅಧ್ಯಕ್ಷ ಭಾಷಣ ಮಾಡಿ, ಭಾಷಾವಾರು ಪ್ರಾಂತದ ಚಳುವಳಿಯ ಇತಿಹಾಸವನ್ನು ವಿವರಿಸಿ, ಮೈಸೂರು ಪ್ರತ್ಯೇಕವಾಗಿಯೇ ಉಳಿಯಬೇಕೆಂದೂ, ಆಡಳಿತದ ಹಿತದೃಷ್ಟಿಯಿಂದ ಚಿಕ್ಕ ಚಿಕ್ಕ ಪ್ರಾಂತಗಳಿರಬೇಕೆಂದೂ ಹೇಳಿದರು. ಈ ಸಂಸ್ಥಾನವು ಮೊದಲಿನಿಂದಲೂ ಪ್ರಗತಿಪಥದಲ್ಲಿರುವುದಾಗಿಯೂ ಕರ್ನಾಟಕ ವಿಲೀನವಾದರೆ ಅದರ ವೈಶಿಷ್ಟ್ಯವು ಪೂರ್ಣವಾಗಿ ಅಳಿಸಿ ಹೋಗುವುದೆಂದೂ ಅವರು ತಿಳಿಸಿದರು. ಮೈಸೂರನ್ನು ಪ್ರತ್ಯೇಕ ಸಂಸ್ಥಾನವಾಗಿ ಉಳಿಸಿಕೊಳ್ಳಲು ಮಂಡ್ಯದಲ್ಲಿ ಸೇರುವ ವಿಲೀನ ವಿರೋಧಿಗಳ ಸಮ್ಮೇಳನಕ್ಕೆ ಎಲ್ಲರೂ ಭಾಗವಹಿಸುವಂತೆಯೂ, ಮೈಸೂರಿನ ಗೌರವ ಪ್ರತಿಷ್ಠೆಗಳನ್ನು ಕಾಪಾಡಲು ಕಂಕಣಬದ್ಧರಾಗಬೇಕೆಂದು ತಿಳಿಸಿದರು. ಎಂ.ಆರ್. ರಾಮಕೃಷ್ಣ, ಟಿ.ಸಿ. ಕೋದಂಡರಾಮಪಿಳ್ಳೆ, ಟಿ.ನಾರಾಯಣ ಮತ್ತು ಪಿ.ಎಸ್. ಜವರಪ್ಪಗೌಡರು ಭಾಷಣ ಮಾಡಿದರು.[19]

### ಮಂಡ್ಯದಲ್ಲಿ ಮೈಸೂರು ವಿಲೀನ ವಿರೋಧಿ ಚಳುವಳಿ

ಮೈಸೂರು ವಿಲೀನ ವಿರೋಧಿ ಸಮ್ಮೇಳನವು 1.1.1956ರಂದು ಮಂಡ್ಯದಲ್ಲಿ ಆರಂಭ ವಾಯಿತು. ಸಂಸ್ಥಾನದ ನಾನಾ ಭಾಗಗಳಿಂದ 20,000 ಕ್ಕೂ ಹೆಚ್ಚು ಪ್ರತಿನಿಧಿಗಳು ಭಾಗವಹಿಸಿದ್ದರು. ಆ ದಿನ 8.15 ಗಂಟೆಗೆ ಮಾಜಿ ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಹೆಚ್.ಕೆ. ವೀರಣ್ಣಗೌಡರು ಧ್ವಜಾರೋಹಣ ಮಾಡಿದರು. ಮೈಸೂರಿನ ವೈಶಿಷ್ಟತೆಯನ್ನು ಅವರು ತಿಳಿಸಿ ಆಡಳಿತ ಹಿತದೃಷ್ಟಿಯಿಂದ ಮೈಸೂರು ಕರ್ನಾಟಕದಲ್ಲಿ ಐಕ್ಯವಾಗುವುದು ಸರಿಯಲ್ಲವೆಂದು ಸೂಚಿಸಿದರು. ನಂತರ 10.30 ಗಂಟೆಗೆ ಸಮ್ಮೇಳನದ ಅಧ್ಯಕ್ಷ ಕೆ.ಲಕ್ಕಪ್ಪಗೌಡರನ್ನು ಮೆರವಣಿಗೆಯಲ್ಲಿ ನಗರದ ಬೀದಿಗಳಲ್ಲಿ ಕರೆತರಲಾಯಿತು. ಹೆಚ್.ಕೆ.ವೀರಣ್ಣಗೌಡ, ಕೆ.ವಿ.ಶಂಕರಗೌಡ ಮುಂತಾದವರು ಮೆರವಣಿಗೆಯ ಮುಂದೆ ಕಾಲ್ನಡಿಗೆಯಲ್ಲಿ ಸಾಗಿದರು.[20] ಸ್ವಾಗತ ಸಮಿತಿ ಅಧ್ಯಕ್ಷರಾದ ಕೆ.ವಿ.ಶಂಕರಗೌಡರು ಭಾಷಣ ಮಾಡಿ ಮೈಸೂರಿನ ಇತಿಹಾಸದಲ್ಲಿ ಮೊಟ್ಟ ಮೊದಲನೆ ಬಾರಿಗೆ ಇಂತಹ ಸಮ್ಮೇಳನವು ನಡೆಯುತ್ತಿರುವುದಾಗಿಯೂ, ಇದಕ್ಕೆ ಅನೇಕ ರೀತಿಯ ಎಡರು ತೊಡರುಗಳನ್ನು ವಿರೋಧಿಗಳು ತಂದೊಡ್ಡುತ್ತಿರುವರೆಂದೂ ತಿಳಿಸಿದರು.[21] ಸಮ್ಮೇಳನದ ಧ್ಯೇಯಗಳನ್ನು ಅವರು ವಿವರಿಸಿ, ಮುಖ್ಯಮಂತ್ರಿಗಳ ಮತ್ತು ಪ್ರದೇಶ ಕಾಂಗ್ರೆಸ್ ಅಧ್ಯಕ್ಷರ ದಾಕ್ಷಿಣ್ಯಕ್ಕಾಗಿ ಜನತೆ ತನ್ನ ನಿಜವಾದ ಅಭಿಪ್ರಾಯಗಳನ್ನು ವ್ಯಕ್ತಪಡಿಸುತ್ತಿಲ್ಲವೆಂದು ತಿಳಿಸಿದರು. ನಗರದಲ್ಲೆಲ್ಲಾ **'ಮೈಸೂರು ಉಳಿಸಿ'** ಭಿತ್ತಿಪತ್ರಗಳನ್ನು ಹಚ್ಚಲಾಗಿತ್ತು.[22]

ಕೆ.ಹನುಮಂತಯ್ಯ ಅವರು ಏಕೀಕರಣದ ಬಗ್ಗೆ ಒಂದು ಸ್ಪಷ್ಟ ನಿಲುವು ತಾಳುವವರಾಗಿರಲಿಲ್ಲ. ಹೊಸದಾಗಿ ರಚಿತವಾಗಲಿರುವ ಕರ್ನಾಟಕ ಪ್ರಾಂತ್ಯಕ್ಕೆ ಸೇರತಕ್ಕ ವಿವರ ಪ್ರದೇಶಗಳನ್ನು ವಿಲೀನಗೊಳಿಸುವ ಕಾರ್ಯವು ಯಶಸ್ವಿಯಾಗಿ ನಡೆಯುವ ಬಗ್ಗೆ ಸಚಿವರ ಮಟ್ಟದ ಒಂದು ಸಮಿತಿಯನ್ನು ರಚಿಸಲು ತಾವು ಆಲೋಚಿಸಿರುವುದಾಗಿಯೂ ವಿವಿಧ ಕರ್ನಾಟಕ ಪ್ರದೇಶಗಳ ಪಾರ್ಲಿಮೆಂಟ್ ಮತ್ತು ಶಾಸನಸಭಾ ಸದಸ್ಯರುಗಳು ಅದರಲ್ಲಿರುವವರೆಂದೂ ಕೆ.ಹನುಮಂತಯ್ಯ ತಿಳಿಸಿದರು.[23]

ಮಂಡ್ಯದಲ್ಲಿ ಮೈಸೂರು ವಿಲೀನವಿರೋಧಿ ಆಂದೋಲನ ನಡೆದ ಬೆನ್ನಲ್ಲೇ ಮತ್ತೊಂದು ಗುಂಪು ಜೆ.ದೇವಯ್ಯನವರ ನೇತೃತ್ವದಲ್ಲಿ ವಿಶಾಲ ಮೈಸೂರು ಪರ ಸಮ್ಮೇಳನವನ್ನು ನಡೆಸಿತು. ಕೆ.ಚಿಕ್ಕಲಿಂಗಯ್ಯ ಮತ್ತು ಜೆ.ದೇವಯ್ಯನವರನ್ನೊಳಗೊಂಡ ಸ್ಥಾಯಿ ಸಮಿತಿ ನಿರ್ಣಯ ಕೈಗೊಂಡು ವಿಶಾಲವಾದ ಕನ್ನಡ ಪ್ರಾಂತಕ್ಕೆ ಮೈಸೂರು ಎಂದು ಹೆಸರಿಡಲು ನಿರ್ಧರಿಸಿದರು. ಈ ಮಧ್ಯೆ ಮಂಡ್ಯದಲ್ಲಿ ಸೇರಿದ್ದ ಮೈಸೂರು ವಿಲೀನ ವಿರೋಧಿ ಯುವಕರ ಸಭೆಯಲ್ಲಿ ಕೆ.ಮರಿಯಪ್ಪನವರ ಅಧ್ಯಕ್ಷತೆಯಲ್ಲಿ ಸ್ವಾಗತ ಸಮಿತಿಯೊಂದನ್ನು ರಚಿಸಿ ನೆಹರು ಅವರು ಬೆಂಗಳೂರಿಗೆ ಬಂದಿದ್ದಾಗ ಮೈಸೂರಿನ ವಿಲೀನವನ್ನು ವಿರೋಧಿಸಿ ಶಾಂತಿಯುತ ಪ್ರದರ್ಶನ ನಡೆಸಬೇಕೆಂದು ತೀರ್ಮಾನಿಸಿದರು.[24]

ಮುಖ್ಯಮಂತ್ರಿ ಕೆ.ಹನುಮಂತಯ್ಯನವರು 1956 ರ ಪುನರ್ವಿಂಗಡಣೆ ಮಸೂದೆಯ ಪರವಾಗಿ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು. ಸಂಸ್ಥಾನಗಳ ಪುನರ್ ವ್ಯವಸ್ಥೆಯ ಮಾರ್ಗದಲ್ಲಿ ಮೂರು ಪ್ರಮುಖ ವಿಷಯಗಳು ಚರ್ಚೆಯಾದವು. ಮೊದಲನೆಯದು ಮೈಸೂರು ಸಂಸ್ಥಾನ ವಿಸ್ತಾರದಲ್ಲಿ ದ್ವಿಗುಣವಾಗಿ ಪರಿಣಮಿಸಬೇಕು ಮತ್ತು ವಿವಾದದಲ್ಲಿರತಕ್ಕಂಥ ಕೆಲವು ಸ್ಥಳಗಳು

ಮೈಸೂರಿನಲ್ಲಿಯೇ ಉಳಿಯಬೇಕು ಹಾಗೂ ಮೈಸೂರು ಎಂಬ ಹೆಸರು ಮುಂದುವರಿಯ ಬೇಕೆಂದು ಈ ಮೂರು ವಿಷಯಗಳಲ್ಲೂ ಕೂಡ ಕೇಂದ್ರ ಸರಕಾರದವರು ಈ ಸಭೆಯ ಅಭಿಪ್ರಾಯಕ್ಕೆ ಮನ್ನಣೆ ನೀಡಿದ್ದಾರೆ. ದಕ್ಷಿಣ ಪ್ರದೇಶ ಎನ್ನತಕ್ಕದ್ದನ್ನು ದಕ್ಷಿಣ ಭಾರತದಲ್ಲಿ ರಚಿಸುವುದು ಸೂಕ್ತ ಎಂದು ಹೇಳಿದ ಮುಖಂಡರ ವಾದ ಕಡಿಮೆಯಾಯಿತು ಹಾಗೂ ದಕ್ಷಿಣ ಭಾರತ ದೇಶದಲ್ಲಿರತಕ್ಕ ಸಂಸ್ಥಾನಗಳು, ಎರಡಾಗಲಿ, ಮೂರಾಗಲಿ, ನಾಲ್ಕಾಗಲಿ ಸೇರಿ ಒಂದು ಸಂಸ್ಥಾನ ಆಗಬೇಕು ಎನ್ನತಕ್ಕವಾದ. ಅದು ಸರಿಯಾದ ವಾದ ಅಲ್ಲ ಎಂದು ಹೇಳುವುದಕ್ಕಾಗು ವುದಿಲ್ಲ. ಕರ್ನಾಟಕ ಏಕೀಕರಣ is an end in itself' ಎಂದು ವಾದಿಸತಕ್ಕದ್ದೂ ಸರಿಯಲ್ಲ. 'Mysore for Mysoreans' ಎಂದು ವಾದಿಸತಕ್ಕದ್ದೂ ಸರಿಯಲ್ಲ. 'Even in the minds of these two sections' if they analyse the situation, these proposals are merely a means to an end the end being the happiness and well-being of the people.' ಅದನ್ನು ನಾವು ಸರಿಯಾಗಿ ಅರ್ಥ ಮಾಡಿಕೊಳ್ಳಬೇಕೆಂದರಲ್ಲದೇ ಉತ್ತರ ಮತ್ತು ದಕ್ಷಿಣ ಕರ್ನಾಟಕದವವರೂ 'ನಾವು ನಾವೇ ಬೇರೆ, ನೀವೇ ಬೇರೆ' ಎಂದು ಚೀನಾದ ಮಹಾ ಗೋಡೆ ರೀತಿ ಮಧ್ಯ ಗೋಡೆಯನ್ನು ಕಟ್ಟಿಕ್ಕೊಳ್ಳುವುದಕ್ಕಾಗುವುದಿಲ್ಲ. ನೆಮ್ಮದಿಯಿಂದ ಬಾಳತಕ್ಕಂಥ ಪರಿಸ್ಥಿತಿಯನ್ನು ರೂಪಿಸಬೇಕಾಗಿರತಕ್ಕ ಜವಾಬ್ದಾರಿ ನಮ್ಮದೇ ಆಗಿದೆ ಎಂದಿದ್ದರು.[25]

ಕರ್ನಾಟಕ ರಚನೆಗೆ ವಿರೋಧ ವ್ಯಕ್ತಪಡಿಸಿದವರು ಮಸೂದೆಗೆ ವಿರೋಧ ವ್ಯಕ್ತಪಡಿಸುತ್ತಲೇ ಬಂದಿದ್ದು, ವಸೂದೆ ಬಹುತೇಕ ಇತ್ಯರ್ಥವಾಗಿದ್ದು, ವಿರೋಧ ವ್ಯಕ್ತಪಡಿಸದಂತೆ ಕಾಂಗ್ರೆಸ್ಸಿಗರಿಗೆ ಹೈಕಮಾಂಡ್ ಸೂಚಿಸಿತ್ತು. ಅಮೃತಸರದ ಕಾಂಗ್ರೆಸ್ ಕೆಲವು ಸಂದರ್ಭಗಳಲ್ಲಿ ದ್ವಿಭಾಷಾ ರಾಜ್ಯಗಳಿಗೆ ಒಲವು ತೋರಿತು. ಕರ್ನಾಟಕ ರಚನೆಯನ್ನು ವಿರೋಧಿಸಿದ ನಾಯಕರು ದ್ವಿಭಾಷಾ ರಾಜ್ಯದ ಕಲ್ಪನೆಯನ್ನು ಒಪ್ಪಿಕೊಳ್ಳಲು ಹಾರಿದರು ಮತ್ತು ಅವರಲ್ಲಿ ಕೆಲವರು ದಕ್ಷಿಣ ಪ್ರದೇಶ ರಚನೆಗೆ ಮನವಿ ಮಾಡಿದರು. ಎಚ್.ಕೆ.ವೀರಣ್ಣಗೌಡ, ಡಿ.ದೇವರಾಜಅರಸ್ ಕರ್ನಾಟಕ ರಚನೆಯ ವಿರುದ್ಧ ದನಿ ಎತ್ತಿದ ಪ್ರಮುಖ ನಾಯಕರು, ಒತ್ತಾಯ ಪೂರ್ವಕವಾಗಿ ಸರ್ವಾನುಮತದಿಂದ ಅಭಿಪ್ರಾಯ ಪಡೆಯಲಾಗಿದೆ. ಕಾಂಗ್ರೆಸ್ ಶಿಸ್ತು ನಮ್ಮ ಮೇಲೆ ಹೇರಲಾಗಿದೆ ಎಂದು ಹೆಚ್.ಕೆ.ವೀರಣ್ಣಗೌಡ ದೂರಿದರು.[26]

ಮೈಸೂರು ಸಂಸ್ಥಾನದಲ್ಲಿ ಏಕೀಕರಣಗೊಳ್ಳಲು ಕೆಂಗಲ್ ಹನುಮಂತಯ್ಯ ಸಂಕಷ್ಟದ ಸಮಯದಲ್ಲಿ ನಿರ್ಣಾಯಕ ಪಾತ್ರವನ್ನು ವಹಿಸಿದರು. ಕರ್ನಾಟಕದ ರಚನೆಯನ್ನು ಬೆಂಬಲಿಸಲು ಮೈಸೂರಿನ ಹೆಚ್ಚಿನ ಸಂಖ್ಯೆಯ ಶಾಸಕರನ್ನು ಪರಿವರ್ತಿಸಲು ಅವರು ಪ್ರಮುಖರಾಗಿ ಕಾರಣರಾಗಿದ್ದರು. ಇಂತಹ ಸಂಕೀರ್ಣ ವಿಷಯವನ್ನು ಸದನದೊಳಗೆ, ಕಾಂಗ್ರೆಸ್ ಪಕ್ಷದೊಳಗೆ ಮತ್ತು ರಾಜ್ಯದ ಜನರ ಗುಂಪುಗಳ ನಡುವೆ ವೈಷಮ್ಯಗಳಿವೆ ಅವರು ಸಮಸ್ಯೆಯನ್ನು ಕೌಶಲ್ಯದಿಂದ ನಿಭಾಯಿಸಿದರು ಮತ್ತು ಅವರ ಪ್ರಯತ್ನಗಳು, ಮನವೊಲಿಕೆ ಮತ್ತು ರಾಜನೀತಿತ್ವದಿಂದಾಗಿ ಸಮಸ್ಯೆಯು ಬಹುಪಾಲು ಜನರ ವ್ಯಾಪ್ತಿಗೆ ಪರಿಹಾರವಾಯಿತು. ಅಂತಿಮವಾಗಿ ನವೆಂಬರ್ 1956 ರಲ್ಲಿ ಮೈಸೂರು ರಾಜ್ಯ ರಚನೆಗೆ ಕಾರಣವಾಯಿತು.

ನೂತನ ಮೈಸೂರಿನ ಉದಯೋತ್ಸವದಲ್ಲಿ ಗರ್ವನರ್ ಶ್ರೀ ಜಯಚಾಮರಾಜ ಒಡೆಯರ್ ರವರು ಸ್ವಾಗತ ಭಾಷಣ ಮಾಡಿದರು. ಅವರು ದೇಶದ ಅಭ್ಯುದಯವಾದ ಸಾಧನೆಯ ಬಗ್ಗೆ ನೂತನ ಸರ್ಕಾರವು ಶ್ರಮವಹಿಸುವುದೆಂದು ತಿಳಿಸಿದರು. ಸ್ವಾತಂತ್ರ್ಯ ಬಂದ 9 ವರ್ಷಗಳಲ್ಲಿ ಅನೇಕ ಬದಲಾವಣೆಗಳು ಆಗಿರುವುವು ಹೊಸ ಬದಲಾವಣೆಗಳಿಂದ ನವ ಭಾರತದ ಗಣರಾಜ್ಯದ ಬಗ್ಗೆ ಯಾವ ಶಂಕೆಗೂ ಆಸ್ಪದವಿರುವುದಿಲ್ಲ. ಕರ್ನಾಟಕಕ್ಕಾಗಿ ಚಳುವಳಿಯು ಕನ್ನಡಿಗರೆಲ್ಲರೂ ಒಂದೆಂಬ ಭಾವನೆಗೆ ಸಾಕ್ಷಿಯಾಗಿದೆ ಹೃದಯದಲ್ಲಿ ಒಂದಾಗಿದ್ದ ನಾಡು. ಈಗ ಅಧಿಕೃತ ಮುದ್ರೆಯೊಡನೆ ಒಟ್ಟುಗೂಡಿದೆ. ಈ ಸಂದರ್ಭದಲ್ಲಿ ವಿಸ್ತೃತ ಮೈಸೂರಿಗೆ ಸೇರಿದ ಎಲ್ಲ ಕನ್ನಡಿಗರನ್ನೂ ನಾವು ಅಭಿನಂದಿಸುತ್ತೇವೆ. ಕನ್ನಡಿಗರು ತಮ್ಮ ಪ್ರತ್ಯೇಕ ಸಂಸ್ಥಾನವನ್ನು ಕೇಳಿರುವುದು ಯಾವ ವಿಧವಾದ ಸಂಕುಚಿತ ಭಾವನೆಯಿಂದಲೂ ಅಲ್ಲ. ಭಾಷೆಯು ಗುರಿಯು ಸಾಧನೆಗೆ ಒಂದು ಮಾರ್ಗ. ರಾಷ್ಟ್ರದ ಈ ಭಾಗವನ್ನು ಸುಖೀ ರಾಜ್ಯವನ್ನಾಗಿ ಪರಿವರ್ತಿಸುವ ಕರ್ತವ್ಯವು ಕನ್ನಡಿಗರದಾಗಿದೆ ಎಂದು ತಿಳಿಸಿದರು.[27]

ಹೀಗೆ ಮೈಸೂರು ಸಂಸ್ಥಾನದಲ್ಲಿ ಏಕೀಕರಣ ಚಳುವಳಿಯ ಹಲವಾರು ನಾಯಕರ ಬದಲಾದ ನಿಲುವಿನಿಂದ ಸೋಲನ್ನಪ್ಪಿತ್ತು. ಚಳುವಳಿಯ ಮಂಚೂಣಿಯಲ್ಲಿದ್ದ ಅಗ್ರನಾಯಕರೇ ಕೇಂದ್ರ ನಾಯಕರನ್ನು ಸಂಪ್ರೀತಿಗೊಳಿಸುವ ಉದ್ದೇಶದಿಂದಲೇ ಈ ವ್ಯಕ್ತಿಗಳು ಏಕೀಕರಣದ ಕಡೆ ವಾಲಿದರು. ಇದರಿಂದ ಅಂತಿಮವಾಗಿ ಚಳುವಳಿಯು ಅಖಂಡ ಕರ್ನಾಟಕದ ಏಕೀಕರಣ ನಿಲುವಿಗೆ ವಿಧಿ ಇಲ್ಲದೇ ಬದ್ದರಾಗಬೇಕಾಯಿತು.

## ಅಡಿ ಟಿಪ್ಪಣಿಗಳು


1. ಚಂದ್ರಶೇಖರ್.ಎಸ್.(ಸಂ)(2018) ಕರ್ನಾಟಕ ಚರಿತ್ರೆ, ಸಂ:7 ಕನ್ನಡ ವಿಶ್ವವಿದ್ಯಾಲಯ ಹಂಪಿ..ಪುಟ.283.
2. ಎಸ್.ಶಿವರಾಮು(2011) ಮಂಡ್ಯ ಜಿಲ್ಲೆಯ ಜನಪರ ಚಳುವಳಿಗಳು, ಬೆಂಗಳೂರು ಪುಟ.61
3. ಪಾಟೀಲಪುಟ್ಟಪ್ಪ–.(1991) ಕರ್ನಾಟಕ ಕಥೆ.ಬೆಂಗಳೂರು.ಪುಟ. 29.31
4. ಸಾಧ್ವಿ–ಬುಧವಾರ. 12.10.1955.ಸಂಚಿಕೆ 60.
5. Extracts of Debates on SRC 1955, Part II. Bangalore.PP.343-344
6. ಗೋಪಾಲರಾವ್ಎಚ್.ಎಸ್(1996).–ಕರ್ನಾಟಕ ಏಕೀಕರಣ ಇತಿಹಾಸ. ಬೆಂಗಳೂರು..ಪುಟ.145

7. ಸಾಧ್ವಿ ಪತ್ರಿಕೆ, ದಿನಾಂಕ 02.04.1949.ಸಂಪುಟ.07 ಸಂಚಿಕೆ202.ಪು.02
8. Mysore Legislative Assembly Debates 27 July 1953
9. Proceedings of Mysore Legislative Assembly, 16 November, 1955
10. ಸಾಧ್ವಿ ಪತ್ರಿಕೆ 08.11.1953 ಭಾನುವಾರ ಸಂಪುಟ, 2, ಸಂಚಿಕೆ 92.
11. ಸಾಧ್ವಿ ಪತ್ರಿಕೆ 9.1.1953, ಸೋಮವಾರ, ಸಂಪುಟ,10, ಸಂಚಿಕೆ.142
12. ಸಾಧ್ವಿ ಪತ್ರಿಕೆ,113.5 1953,
13. ಸಾಧ್ವಿಪತ್ರಿಕೆ, 17.5–1953. ಭಾನುವಾರ. ಸಂಪುಟ.17, ಸಂಚಿಕೆ,38
14. ಗೋಪಾಲರಾವ್.ಹೆಚ್.ಎಸ್.ಮೇಲೆ ಉದ್ಧರಿಸಿದ ಗ್ರಂಥ–ಪುಟ.222
15. Proceedings of Mysore legislative Assembly- Extracts Debates on State Re-organisation Report-No.1955 P.P.V46-48
16. ಸಾಧ್ವಿ ಪತ್ರಿಕೆ. 3.11.1955. ಗುರುವಾರ. ಸಂಪುಟ.14.ಸಂಚಿಕೆ 80
17. Veerathappa.K. Readings in Moder£À History of Mysore, New Delhi PP.113-114
18. ಸಾಧ್ವಿ ಪತ್ರಿಕೆ. 6.12.1955, ಮಂಗಳವಾರ, ಸಂಚಿಕೆ–112.ಸಂಪುಟ.14
19. ಸಾಧ್ವಿ ಪತ್ರಿಕೆ. 12.12.1955, ಸೋಮವಾರ ಸಂಪುಟ.14.ಸಂಚಿಕೆ 118
20. ವೀರಣ್ಣಗೌಡ ಹೆಚ್.ಕೆ. .(2006) ಬದುಕು ಮೆಲುಕು–ಬೆಂಗಳೂರು.ಪುಟ.221
21. ಎಸ್.ಶಿವರಾಮು (2014) ಕೆ.ವಿ.ಶಂಕರಗೌಡ ಜೀವನ–ಸಾಧನೆ, ಮಂಡ್ಯ., ಪುಟ.97
22. ಎಸ್.ಶಿವರಾಮು (2021) ಸಾಧಕ ಚೇತನ ಎ.ಜಿ.ಬಂದೀಗೌಡ,ಆದಿಚುಂಚನಗಿರಿ. ಪು.89.
23. ಸಾಧ್ವಿ ಪತ್ರಿಕೆ. 10.1.1956, ಮಂಗಳವಾರ.ಸಂಪುಟ:114.ಸಂಚಿಕೆ.145
24. ಎಸ್.ಶಿವರಾಮು(2022) ರಚನಾತ್ಮಕನಾಯಕ.ಜಿ.ಎಸ್. ಬೊಮ್ಮೇಗೌಡ. ಮಂಡ್ಯ.ಪುಟ:76
25. Mysore legislative Assembly Dabates 31st March 1956, The States re organization Bill. 1956.PP.1394.1395.
26. Decan Hearld , November 4.1955
27. ಸಾಧ್ವಿ 4.11.1956. ಸಂಪುಟ.15. ಸಂಚಿಕೆ, 92